VIJAYAKUMAR KANNUR
Digitally signed by VIJAYAKUMAR KANNUR
Date: 2025.12.04 16:58:02 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 04.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ RSN ವಕೀಲರಿಂದ :**

ನಾನು ಶಾಲೆ ಕಲಿತಿರುವುದಿಲ್ಲ. ಪ್ರತಿವಾದಿ 1 ವಿನ ತಂದೆಯಾದ ವೆಂಕಪ್ಪ ಯಾವ ದಿನಾಂಕದಂದು ಮೃತ ಪಟ್ಟಿರುವರು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ವಿನನಿಗೆ ಎಷ್ಟು ಜನ ಸಹೋದರರು ಮತ್ತು ಸಹೋದಿರಿಯರು ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ನನ್ನ ಅತ್ತೆ, ಮಾವ ಮತ್ತು ಮೈದನ ವಿರುದ್ದ ದಾಖಲು ಮಾಡಿರುವೆನು. ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾ ಆಸ್ತಿಗಳಲ್ಲಿ ¼ ಪಾಲು ವಿಭಾಗ ಕೋರಿ ದಾಖಲು ಮಾಡಿರುವೆವು. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯಲ್ಲಿಯೂ ಸಹ ¼ ಪಾಲು ಕೇಳಿ ಬರೆಸಿ ಹಾಕಿರುವೆವು. ಈ ದಾವೆಯ ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದಿ 1 ವಿಗೆ ತಂಗೆವ್ವ ಎಂಬ ಸಹೋದರಿ, ಕೃಷ್ಣ ಎಂಬ ಸಹೋದರ ಇರುವನು ಎಂದರೆ ಸರಿ. ಇವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಕೃಷ್ಣ ಇತನಿಗೆ ಶೋಭಾ ಎಂಬ ಹೆಂಡತಿ ಹಾಗೂ ಸ್ವಾತಿ ಮತ್ತು ಸಹನಾ ಎಂಬ ಇಬ್ಬರು ಹೆಣ್ಣು ಮಕ್ಕಳು ಇರುವರು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಇವರು ಮತ್ತು ಪ್ರತಿವಾದಿ 1 ರವರು ಪ್ರತ್ಯೇಕವಾಗಿ ವಾಸಿಸುತ್ತಿರುವರು ಎಂದು ನುಡಿಯುವರು. ಕೃಷ್ಣ ಕುಟುಂಬ ಸದಸ್ಯರು ಪ್ರತ್ಯೇಕವಾಗಿ ವಾಸಿಸುತ್ತಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

3. ಈ ದಾವೆಯ ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ನಾನು ನೋಡಿರುವೆನು. ಈ ದಾವಾ ಆಸ್ತಿಗಳು ಪ್ರತಿವಾದಿ 1 ವಿನ ತಂದೆಯ ಮುಖಾಂತರ ಬಂದಿರುವಂತಹ ಆಸ್ತಿಗಳಾಗಿರುವವು. ನಿಪಿ 3 ರ ದಾಖಲೆಯಲ್ಲಿ ಕೃಷ್ಣ, ಶೋಭಾ, ಸ್ವಾತಿ ಹಾಗೂ ತಿಮ್ಮಪ್ಪ ಎಂಬುವವರ ಹೆಸರು ಕಾಲಂ ನಂ. 12 ರಲ್ಲಿ ದಾಖಲಿರುವವು ಎಂದರೆ ಸರಿ. ಇವರನ್ನು ಈ ದಾವೆಗೆ ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅವರು ಪ್ರತ್ಯೇಕವಾಗಿ ವಾಸವಾಗಿರುವರು ಎಂದು ಉತ್ತರಿಸುವರು. ವೆಂಕಪ್ಪನ ವಾರಸುದಾರರಾದ ಪ್ರತಿವಾದಿ 1, ಇತನ ಸಹೋದರನಾದ ಕೃಷ್ಣ ಹಾಗೂ ಸಹೋದರಿಯಾದ ತಂಗೆವ್ವಳ ಮಧ್ಯೆ ವಾಟ್ನಿಯಾಗಿರುವುದಿಲ್ಲ ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನುಡಿಯುವುದೇನೆಂದರೆ ಪ್ರತಿವಾದಿ 1 ರವರ ಪಾಲಿಗೆ ಬಂದಿರುವ ಆಸ್ತಿಯಲ್ಲಿ ¼ ಪಾಲು ಕೋರಿ ಈ ದಾವೆ ದಾಖಲು ಮಾಡಿರುವುದಾಗಿ ಎಂದು ಉತ್ತರಿಸುವರು. ಪ್ರತಿವಾದಿ 1 ತನ್ನ ತಂದೆಯ ಅಸ್ತಿಯಲ್ಲಿ ಯಾವುದೇ ವಾಟ್ನಿ ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಪ್ರತಿವಾದಿ 1 ವಿನ ಸಹೋದರ ಮತ್ತು ಸಹೋದರಿಯನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿದರೇ ಅವರಿಗೆ ಹಿಸ್ಸೆ ಹೋಗುತ್ತದೆ ಎಂಬ ಕಾರಣಕ್ಕೆ ಅವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿ ಪ್ರತಿವಾದಿ 1 ರವರ ಪೂರ್ವಜರ ಆಸ್ತಿಯೆಂದು ತೋರಿಸುವ ಸಲುವಾಗಿ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ವಾದ ಪತ್ರದಲ್ಲಿ ದಾವಾ ಆಸ್ತಿ ಯಾರಿಂದ ಯಾರಿಗೆ ಹೇಗೆ ಬಂದವು ಎಂಬ ಸಂಗತಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

5. ನನ್ನ ಗಂಡ ದಿಃ 02.07.2022 ರಲ್ಲಿ ಮೃತ ಪಟ್ಟಿರುವನು. ನನ್ನ ಗಂಡ ಮದ್ಯ ವ್ಯಸನಿ ಹಾಗೂ ದೂಮಪಾನದ ವ್ಯಸನಿಯಾಗಿದ್ದನು ಎಂದರೆ ಸರಿ. ನನ್ನ ಗಂಡ ಬಹಳಷ್ಟು ಸಾಲ

ಮಾಡಿದ್ದನು ಎಂದರೆ ಸರಿ. ನನ್ನ ಗಂಡನನ್ನು ಪ್ರತಿವಾದಿ 1 ರಿಂದ 3 ರವರು ಆರೈಕೆ ಮಾಡುತ್ತಿದ್ದರು ಎಂದರೆ ಸಾಕ್ಷಿ ತಾನು ಸಹ ಮಾಡುತ್ತಿದ್ದಳು ಎಂದು ಉತ್ತರಿಸುವರು. ನನ್ನ ಗಂಡ ಮೃತ ಪಟ್ಟು 6 ತಿಂಗಳವರೆಗೆ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನು. ನಂತರ ನನ್ನ ತವರು ಮನೆಗೆ ಬಂದಿರುವೆನು. ಈಗ ನಾನು ನನ್ನ ತವರು ಮನೆ ಕಳ್ಳಿಗುದ್ದಿ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿ 2 ರವರ ಮಧ್ಯೆ ಸಂಬಂಧ ಚೆನ್ನಾಗಿ ಉಳಿಯದ ಕಾರಣ ನಾನು ನನ್ನ ತವರು ಮನೆಗೆ ಹೋಗಿರುವೆನು. ನನ್ನ ಗಂಡ ಮೃತ ಪಟ್ಟ ನಂತರ ಆತನ ಪಾಲಕರು ಮತ್ತು ಕುಟುಂಬ ಸದಸ್ಯರು ನನಗೆ ತೊಂದರೆ ನೀಡಲು ಪ್ರಾರಂಭಿಸಿರುವುದರಿಂದ ಆ ಕಾರಣಕ್ಕೆ ನಾನು ತವರು ಮನೆಗೆ ಹೋಗಿರುವೆನು. ನಾನು ಪ್ರತಿವಾದಿಯರಿಗೆ ನನ್ನ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸಿಸಲು ಜಾಗ ನೀಡುವಂತೆ ಹಿರಿಯರ ಮೂಲಕ ವಿನಂತಿಸಿದಾಗ ಆಗ ಅವರು ನನಗೆ ಸ್ಪಂದನೆ ಮಾಡದೇ ನ್ಯಾಯಾಲಯದ ಮೂಲಕ ಪಾಲು ಪಡೆದುಕೊಳ್ಳುವಂತೆ ಹೇಳಿರುವುದರಿಂದ ಆ ಕಾರಣಕ್ಕಾಗಿ ಈ ದಾವೆ ದಾಖಲು ಮಾಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು.

6. ಪ್ರತಿವಾದಿ 3 ರವರು ಇಂಜಿಯರ್ ಆಗಿರುವರು ಎಂದರೆ ಸರಿ. ಇವರು ಬೆಂಗಳೂರಿನಲ್ಲಿ ವಾಸವಾಗಿರುವರು ಎಂದರೆ ಸರಿ. ಇತ ಟ್ರೂ ಬ್ಲೂ ಎಂಬ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವನು ಎಂದರೆ ಸರಿ. ಇವರಿಗೆ ಪ್ರತಿ ತಿಂಗಳು ರೂ. 1 ಲಕ್ಷ ಕ್ಕಿಂತಲೂ ಹೆಚ್ಚಿನ ಸಂಬಳ ಬರುತ್ತದೆ ಎಂದರೆ ಸರಿ. ನಮ್ಮ ಕುಟುಂಬದ ನಿರ್ವಹಣೆಯನ್ನು ಪ್ರತಿವಾದಿ 3 ವಿನ ಸಂಬಳದಿಂದ ನಡೆಯುತ್ತಿತ್ತು ಎಂದರೆ ಸರಿಯಲ್ಲ. ನನ್ನ ಗಂಡ ತನ್ನ ದುಡಿಮೆಯ ಆದಾಯದಿಂದ ನಮ್ಮ ಕುಟುಂಬ ನಿರ್ವಹಿಸಿಕೊಂಡು ಹೋಗುತ್ತಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಪ್ರತಿವಾದಿ 3 ರವರ ದುಡಿಮೆಯ ಮೇರೆಗೆ ಸರ್ವೇ ನಂಬರ್ 121/3 ಜಮೀನಿನ್ನು ಸಂಪಾದನೆ ಮಾಡಿರುವನು ಎಂದರೆ ಸರಿಯಲ್ಲ. ನನ್ನ ಗಂಡ, ಪ್ರತಿವಾದಿ 1 ರಿಂದ 3 ರವರ ಕಡೆಯಿಂದ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿ ನಂತರ ಈ ಆಸ್ತಿಯನ್ನು ಪ್ರತಿವಾದಿ 3 ರವರು ಖರೀದಿ ಮಾಡಿರುವರು ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಒಟ್ಟಾರೆಯಾಗಿ ಖರೀದಿ ಮಾಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುಮರು.

7. ವಿಪಿಸಿ ನಂ. 42 ರ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುವುದು. ಇದಕ್ಕೆ ಸಂಬಂಧಪಟ್ಟಂತೆ ಉತಾರ ದಾಖಲಾತಿಯನ್ನು ಹಾಜರು ಪಡಿಸಿರುವೆವು. ವಿಪಿಸಿ ನಂ. 42 ರ ಅಸ್ತಿಯು ನನ್ನ ತವರು ಮನೆಯವರು ನನಗೆ ಕೊಡಿಸಿರುವಂತಹ ಆಸ್ತಿಯಾಗಿರುವುದು, ಅದು ಒಟ್ಟು ಕುಟುಂಬದ ಆಸ್ತಿಯಾಗಿರುವುದು ಎಂದರೆ ಸರಿಯಲ್ಲ. ನನ್ನ ಗಂಡನ ಆಸ್ಪತ್ರೆಯ ಚಿಕಿತ್ಸೆಗಾಗಿ ನಾನು ಬೇರೆ ಜನರಿಂದ ಕೈಗಡ ರೂಪದಲ್ಲಿ ಸಾಲವಾಗಿ ಪಡೆದಿದ್ದು ಆ ಸಾಲದ ಹಣ ಮರು ಸಂದಾಯಕ್ಕಾಗಿ ಅದನ್ನು ಮಾರಾಟ ಮಾಡಿರುವೆನು. ಈ ಮನೆಯ ಆಸ್ತಿಯಲ್ಲಿ ಪ್ರತಿವಾದಿಯರಿಗೆ ಹಕ್ಕು ಹಿತಾಸಕ್ತಿ ಇದ್ದರೂ ಸಹಿತ ನಾನು ಅದನ್ನು ಮಾರಾಟ ಮಾಡಿರುವೆನು ಎಂದರೆ ಸರಿಯಲ್ಲ. ಈ ಆಸ್ತಿಯನ್ನು ರೂ. 15 ಲಕ್ಷ ಹಣಕ್ಕೆ ಮಾರಾಟ ಮಾಡಿರುವೆನು, ಏಕೆಂದರೆ ಸಾಲದ ಮೊತ್ತ ರೂ. 15 ಲಕ್ಷವಾಗಿತ್ತು. ಆ ಖರೀದಿದಾರರನ್ನು ಈ ದಾವೆಗೆ ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

8. ನೀರಲಕಟ್ಟೆ ಗ್ರಾಮದ ಸರ್ವೇ ನಂಬರ್ 125/ಬಿ ಪ್ಲಾಟ್ ನಂ. 61 ನ್ನು ನನ್ನ ಗಂಡ ತನ್ನ ಸ್ವಂತ ದುಡಿಮೆಯ ಆದಾಯದಿಂದ ಖರೀದಿ ಮಾಡಿದ್ದನು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ, ಏಕೆಂದರೆ ಅದು ನನ್ನ ಗಂಡನ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ. ಈ ಆಸ್ತಿ ಸ್ವ ಸಂಪಾದನೆ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 4 ಮತ್ತು ನೀರಲಕಟ್ಟೆ ಗ್ರಾಮದ ಸರ್ವೇ ನಂಬರ್ 125/ಬಿ ಪ್ಲಾಟ್ ನಂ. 6 ರ ಆಸ್ತಿಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿದರೇ ಪ್ರತಿವಾದಿಯರಿಗೆ ಪಾಲು ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಉದ್ದೇಶಪೂರಕವಾಗಿ ಅವುಗಳನ್ನು ದಾವಾ ಆಸ್ತಿಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆತನಕ್ಕೆ ಎಷ್ಟು ಜಮೀನು ಮತ್ತು ಮನೆಗಳು ಇರುವವು ಎಂಬ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಾಗಿ ಎಂದು ಉತ್ತರಿಸುವರು. ದಾವಾ ಆಸ್ತಿಗಳು ಎಲ್ಲವೂ ನೀರಾವರಿ ಜಮೀನುಗಳು ಎಂದರೆ ಸರಿ. ಈ ಜಮೀನುಗಳಿಂದ ಪ್ರತಿ ವರ್ಷ ರೂ. 3-4 ಲಕ್ಷ ಆದಾಯ ಬರುವುದು ಎಂದರೆ ಸರಿ. ನಮ್ಮ ಮನೆತನದ ಹಿರಿತನ ನನ್ನ ಗಂಡ ಮಾಡುತ್ತಿದ್ದ ಎಂದರೆ ಸರಿಯಲ್ಲ. ಪ್ರತಿವಾದಿ 1 ಹಾಗೂ ನನ್ನ ಗಂಡ ಇಬ್ಬರು ಮಾಡುತ್ತಿದ್ದರು.

ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನ ಗಂಡನೇ ಜಾಸ್ತಿ ಮಾಡುತ್ತಿದ್ದ ಎಂದರೆ ಸರಿಯಲ್ಲ. ಇಬ್ಬರು ಮಾಡುತ್ತಿದ್ದರು ಎಂದು ಸಾಕ್ಷಿ ಉತ್ತರಿಸುವರು.

9. ದಾವಾ ಆಸ್ತಿ ಇಲ್ಲದ ಸರ್ವೇ ನಂಬರ್ 108/6 ವಿಸ್ತೀರ್ಣ 2 ಎಕರೆ 32 ಗುಂಟೆ ಕನಸಗೇರಿ ಗ್ರಾಮದ ಆಸ್ತಿಯು ಸಹ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ನನ್ನ ತಂದೆ ಸ್ವ ಸಂಪಾದನೆ ಮಾಡಿರುವ ಆಸ್ತಿಯಾಗಿರುವುದು. ಈ ಆಸ್ತಿಗೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಇರುವ ಕಳ್ಳಿಗುದ್ದಿ ಗ್ರಾಮದ ಜಮೀನು ಕೆನಲ್ ಮಾಡುವ ಸಲುವಾಗಿ ಭೂ ಸ್ವಾಧೀನ ಮಾಡಿಕೊಂಡಿದ್ದು ಅದರಿಂದ ಬಂದ ಹಣದಲ್ಲಿ ಕನಸಗೇರಿ ಗ್ರಾಮದ ಸರ್ವೇ ನಂಬರ್ 108/6 ರ ಜಮೀನನ್ನು ನನ್ನ ತಂದೆ ಖರೀದಿ ಮಾಡಿರುವರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಭೂ ಪರಿಹಾರ ಹಣ ಎಷ್ಟು ನೀಡಿರುವರು ಎಂದು ಈಗ ನನಗೆ ನಿರ್ದಿಷ್ಟವಾಗಿ ಹೇಳು ಬರುವುದಿಲ್ಲ, ಆದರೆ ದಾಖಲೆಗಳು ಇರುವುದಾಗಿ ಎಂದು ಸಾಕ್ಷಿ ಉತ್ತರಿಸವರು. ಆ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಕಳ್ಳಿಗುದ್ದಿ ಗ್ರಾಮದ ಜಮೀನು ಒಣಬೇಸಾಯ ಜಮೀನು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ನನ್ನ ತಂದೆಯ ಮನೆತನ ಬಹಳ ಬಡತನದಿಂದ ಕೂಡಿತ್ತು ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವುದೇ ವರಮಾನ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ನನ್ನ ಪಾಲಕರಿಗೆ ಸಾಕಷ್ಟು ಹಣಕಾಸಿನ ನೇರವು ನೀಡಿರುವನು ಎಂದರೆ ಸರಿಯಲ್ಲ. ನನ್ನ ಗಂಡನ ಮನೆಯಲ್ಲಿನ ಆದಾಯವನ್ನು ನಾನು ಮತ್ತು ನನ್ನ ಗಂಡ ತೆಗೆದುಕೊಂಡು ಹೋಗಿ ತವರು ಮನೆಯಲ್ಲಿ ಇಟ್ಟು ಆಸ್ತಿಗಳನ್ನು ಸಂಪಾದನೆ ಮಾಡಿದ್ದೇನೆ ಎಂದರೆ ಸರಿಯಲ್ಲ.

10. ಸರ್ವೇ ನಂಬರ್ 125/2 ಹಾಗೂ 132/2 ಈ ಆಸ್ತಿಗಳು ಪ್ರತಿವಾದಿ 1 ರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಈ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸುವ ಸಲುವಾಗಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಉತಾರಗಳನ್ನು ಹಾಜರು ಪಡಿಸಿರುವುದಾಗಿ ಎಂದು ಸಾಕ್ಷಿ

ಉತ್ತರಿಸುವರು. ನನ್ನನ್ನು ಸತೀಶನ ಜೊತೆ ವಿವಾಹ ಮಾಡುವ ಸಮಯದಲ್ಲಿ ಪ್ರತಿವಾದಿ 1 ರವರ ಹೆಸರಿನಲ್ಲಿ ಇರುವ ಆಸ್ತಿಗಳು ಎಲ್ಲವೂ ಪಿತ್ರಾರ್ಜಿತ ಆಸ್ತಿಗಳು ಎಂದು ಹೇಳಿದ್ದರು. ದಾವಾ ಆಸ್ತಿ ಕ್ರ. ಸಂಖ್ಯೆ 2 ಮತ್ತು 3 ರ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೂ ಮತ್ತು ಉಳಿದ ವಾದಿಯರಿಗೆ ¼ ಹಿಸ್ಸೆ ಇರುವುದಾಗಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 121/3 ಪ್ರತಿವಾದಿ 3 ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಭಿನ್ನಾಭಿಪ್ರಾಯ ಬರದೇ ಇದ್ದರೂ ಸಹಿತ ಅವರಿಗೆ ತೊಂದರೆ ನೀಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.12.04 16:58:11 +0530